[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. |
|---|---|

Criminal Case No. 500/2023

..................................................Vs....................................

ಸಾಕ್ಷಿದಾರನ ಹೆಸರು ಃ. ಕಿಶೋರ್ ಆಚಾರ್ಯ ಪಿ.ಡಬ್ಲ್ಯೂಃ 11

ತಂದೆಯ ಹೆಸರುಃ ದಿ. ಸದಾನಂದ ಆಚಾರ್ಯ ಸಿ.ಡಬ್ಲ್ಯೂಃ 12

ಪ್ರಾಯ ಃ 62 ವರ್ಷ

ಉದ್ಯೋಗ ಃ ಅಕ್ಕಸಾಲಿಗ

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 27-02-2026

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರು

ಸುಮಾರು 5 ವರ್ಷಗಳ ಹಿಂದೆ ಪೋಲಿಸರು ನನ್ನನ್ನು ಠಾಣೆಗೆ ಕರೆದಿದ್ದು, ಚಿನ್ನಾಭರಣಗಳನ್ನು ಪರಿಶೀಲಿಸಿ ಅವುಗಳ ತೂಕವನ್ನು ತಿಳಿಸುವಂತೆ ತಿಳಿಸಿರುತ್ತಾರೆ. ಅದರಂತೆ ನಾನು ನನ್ನ ಬಳಿ ಇದ್ದ ಬಂಗಾರವನ್ನು ಪರಿಶೀಲಿಸುವ ಸಾಮಾಗ್ರಿಯಲ್ಲಿ ಪರಿಶೀಲಿಸಿ,ಬಂಗಾರವನ್ನು ಅಳತೆ ಮಾಡುವ ಯಂತ್ರದಲ್ಲಿ ಅಳತೆ ಮಾಡಿ, ಅವುಗಳ ವಿವರ ನೀಡಿರುತ್ತೇನೆ. ಯಾವೆಲ್ಲಾ ಒಡವೆಗಳನ್ನು ಪರಿಶೀಲನೆ ಮಾಡಿರುತ್ತೇನೆ ಹಾಗುಾ ಅವುಗಳ ತೂಕ ಎಷ್ಟು ಎಂದು ಈಗ ನೆನಪಿರುವುದಿಲ್ಲ. ಪೋಲಿಸರು ನಾನು ಚಿನ್ನಾಭರಣಗಳ ಪರಿಶೀಲನೆ ಮಾಡಿದ ವಿಚಾರವಾಗಿ ಎರಡು ದಾಖಲೆಗಳಿಗೆ ಸಹಿ ಪಡೆದದಿರುತ್ತಾರೆ. ಅಲ್ಲದೆ ನಾನು ಚಿನ್ನಾಭರಣಗಳನ್ನು ಪರಿಶೀಲನೆ ನಡೆಸಿ ಅವುಗಳ ವಿವರ ಹಾಗೂ ತೂಕವನ್ನು ನಮೂದಿಸಿ, ನನ್ನ ಸಹಿ ಹಾಕಿ, ಪೋಲಿಸರಿಗೆ ದೃಢಪತ್ರ ನೀಡಿರುತ್ತೇನೆ. ಸದ್ರಿ ದೃಢಪತ್ರದಲ್ಲಿ ಏನೆಲ್ಲಾ ಬರೆದಿರುತ್ತೇನೆ ಎಂದು ಈಗ ನೆನಪಿರುವುದಿಲ್ಲ.

ಸಾಕ್ಷಿಯು ನಿಪಿ-26 ಮತ್ತು ನಿಪಿ-30 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-26(ಸಿ) ಹಾಗೂ ನಿಪಿ-30(ಸಿ) ಎಂದು

ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ದೃಢಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದೃಢಪತ್ರ ವನ್ನು ನಿಪಿ-34 ಎಂದು, ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಚಿನ್ನಾಭರಣಗಳ ಭಾವಚಿತ್ರಗಳನ್ನು ತೋರಿಸಲಾಗಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ದಿಃ 21-12-2022 ರಂದು ಪೋಲಿಸರು 1 ನೇ ಆರೋಪಿ ತೋರಿಸಿಕೊಟ್ಟಂತೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕು ಆರಂಬೋಡಿ ಗ್ರಾಮದ ಕಾಂತಾರಬೆಟ್ಟು ಜಯಲಕ್ಷ್ಮೀ ನಿವಾಸ ಎಂಬಲ್ಲಿ ಚಾಸಾ-6 ಮತ್ತು ಚಾಸಾ-9 ರವರ ಸಮಕ್ಷಮ ಬೆಳ್ಳಿಗ್ಗೆ 7.45 ಗಂಟೆಯಿಂದ 9.15 ಗಂಟೆಯವರೆಗೆ ಸೊತ್ತು ಸ್ವಾಧೀನತಾ ಮಹಜರು ಮಾಡಿ, 1 ನೇ ಆರೋಪಿ ಹಾಜರುಪಡಿಸಿದ ಒಟ್ಟು 205.53 ಗ್ರಾಮ್ ತೂಕದ ಬಂಗಾರದ ಒಡವೆಗಳನ್ನು, ಬೆಳ್ಳಿಯ ಎರಡು ಎಳೆಯ ಉಡಿದಾರವನ್ನು, ಒಂದು ಅಡಿ ಉದ್ದದ ಕಬ್ಬಿಣದ ರಾಡ್ ನ್ನು ಭಾವಚಿತ್ರ ತೆಗೆದು ಸ್ವಾಧೀನಪಡಿಸಿಕೊಂಡಿರುತ್ತಾರೆ ಹಾಗೂ ನಿಪಿ-27 ಭಾವಚಿತ್ರದಲ್ಲಿ ನಾನು ಇರುತ್ತೇನೆ ಎಂದರೆ ಸರಿಯಲ್ಲ.

ಅದೇ ದಿನ ಪೋಲಿಸರು 2 ನೇ ಆರೋಪಿ ತೋರಿಸಿಕೊಟ್ಟಂತೆ ಕಾರ್ಕಳ ತಾಲೂಕು ಕಲ್ಯಾ ಗ್ರಾಮದ ಚಿಗುರು ನಿವಾಸ ಎಂಬಲ್ಲಿ ಚಾಸಾ-7 ಮತ್ತು ಚಾಸಾ-8 ರವರ ಸಮಕ್ಷಮ ಮಧ್ಯಾಹ್ನ 1.30 ಗಂಟೆಯಿಂದ 2.30 ಗಂಟೆಯವರೆಗೆ ಸೊತ್ತು ಸ್ವಾಧೀನತಾ ಮಹಜರು ಮಾಡಿ, 2 ನೇ ಆರೋಪಿ ಹಾಜರುಪಡಿಸಿದ 11 ಗ್ರಾಮ್ ತೂಕದ ಬಂಗಾರದ ಬಳೆಯನ್ನು ಭಾವಚಿತ್ರ ತೆಗೆದು ಸ್ವಾಧೀನಪಡಿಸಿಕೊಂಡಿರುತ್ತಾರೆ ಹಾಗೂ ನಿಪಿ-31 ಭಾವಚಿತ್ರದಲ್ಲಿ ನಾನು ಇರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್.ಕೆ. ವಕೀಲರಿಂದಃ

ಹಲವಾರು ಪ್ರಕರಣಗಳಲ್ಲಿ ಚಿನ್ನ ತೂಕ ಮಾಡಿದ ನಂತರ ಪೋಲಿಸರು ನನ್ನನ್ನು ಸಾಕ್ಷಿಯಾಗಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-34 ನ್ನು ಪೋಲಿಸರು ತಯಾರಿಸಿರುತ್ತಾರೆ ಎಂದರೆ ಸರಿ. ನಾನು ಸಹಿ ಮಾಡಿದ್ದೇನೆ ಎಂದು ಹೇಳುವ ನಿಪಿ-26, ನಿಪಿ-30, ನಿಪಿ-34 ದಾಖಲೆಗಳಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ